(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 6] ಗುರುವಾರ 25—9—47 [ಬಿಡಿ ಪ್ರತಿ 3 ಪೈ

ದಿವಾನರಲ್ಲಿ ವಿಶ್ವಾಸವಿಲ್ಲ

ಮೈಸೂರು ಪ್ರಜಾವರ್ಗದ ಒಂದು ಮುಖ್ಯ ಆಕ್ಷೇಪ — " ಸರ್ ಅಕ್ಬರ್ ಟ್ " ! ಈ ದಿವಾನರಲ್ಲಿ ವಿಶ್ವಾಸವಿಲ್ಲ ಎಂಬುದು ಪ್ರಕಟವಾಗುತ್ತಿದೆ. ಶ್ರೀಮನ್ಮಹಾರಾಜರು ಜವಾಬ್ದಾರಿ ಸರ್ಕಾರ ಸ್ಥಾಪಿಸಲು ವಿಲಂಬವಾಗುತ್ತಿರುವುದು ದಿವಾನರಿಂದ ಸತ್ಯಾಗ್ರಹದಲ್ಲಿ ಜನತೆಯನ್ನು ನಿಷ್ಠೂರವಾಗಿ ಶಿಕ್ಷಿಸುತ್ತಿರಲು ಕಾರಣರು ದಿವಾನರು. ಮಹಾರಾಜರ ಮತ್ತು ಜನರ ಬಂಧನದ ನಡುವೆ ನಿಂತವರು ದಿವಾನರು. ಅಲ್ಲಿ ಸತ್ಯಾಗ್ರಹವಾರೂಢವಾದ ಬೆನ್ನಲ್ಲೆ, ಶೀಘ್ರದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ವ್ಯವಸ್ಥೆ ಮಾಡಲಾಗುವುದೆಂಬ ಆಶ್ವಾಸನೆಯಿತ್ತರೂ, ಜನರಿಗೆ ಅದರಲ್ಲಿ ವಿಶ್ವಾಸ ಹುಟ್ಟದಂತೆ ತೋರುವುದಿಲ್ಲ. ಸತ್ಯಾಗ್ರಹವೀಗ ಸಂಸ್ಥಾನದ ಹಳ್ಳಿ ಹಳ್ಳಿಗಳಿಗೂ ಹರಡಿದೆ. ವಿಲಂಬದಿಂದ ಹಾನಿಯೇ ಹೆಚ್ಚೆಂದು ತಿಳಿದೂ, ಜನ ಕೋಟಿಯು ಆಕಾಂಕ್ಷೆಗಳನ್ನು ಯಾವ ಶಸ್ತ್ರಾಸ್ತ್ರಗಳೂ ಘಾಸಿ ಶಡೆದಿಡಲಾರದೆಂಬುದನ್ನರಿತೂ, ಜವಾಬ್ದಾರಿ ಸರ್ಕಾರವ ಕೇಳಿಕೆಯು ಒಬ್ಬಿಬ್ಬರ ಕೂಗಿನಿಂದೆ ಸಾರ್ವತ್ರಿಕವಾದ ಕೇಳಿಕೆಯೆಂಬುವನ್ನು ಕಂಡೂ, ಮೈಸೂರು ಮಹಾರಾಜರು, ಇನ್ನೂ ಸ್ಥಿತಿಯು ಕೆಡಲು ಇಂಬುಕೊಡದೆ ಕೂಡಲೇ ಕಾರ್ಯತತ್ಪರರಾಗಬೇಕು. (' ಜವಾಬ್ದಾರಿ ಸರ್ಕಾರ ಸ್ಥಾಪಿಸಿ ಮೈಸೂರಿನ ಕೀರ್ತಿ ಹೆಚ್ಚುವಂತೆ ಮಾಡಿರಿ ' ಎಂದು ಮದ್ರಾಸಿನ ಪ್ರಧಾನ ಸಚಿವ ಶ್ರೀ ಓ. ಪಿ ರಾಮಸ್ವಾಮಿ ರೆಡ್ಡಿಯಾರರು ಶ್ರೀಮನ್ಮಹಾರಾಜರನ್ನುದ್ದೇಶಿಸಿ ಪ್ರಕಟಣೆ ಕೊಟ್ಟಿದ್ದಾರೆ.)

' ಪ್ರಭಾತ '

—ಬೆಂಗಳೂರು ಸೆ 25 — ಮದ್ರಾಸಿನ ಆಂಧ್ರಸಭಾ ಪ್ರತಿಬಂಧಿಸಲ್ಪಟ್ಟಿದೆ

ಸುದ್ದಿಗಳು

ಕೋಲಾರ ಚಾಂಪಿಯನ್ ರೀಫಿನ ಮತ್ತು ಮೈಸೂರು ಮೈನಿನ ಎಂಟು ಸಾವಿರ ಮಂದಿ ಮುಷ್ಕರಿಸಿದ್ದಾರೆ.

ಬಿನ್ನಿ ಮಿಲ್ಲಿನ ಮುಷ್ಕರವು ಸಂಪೂರ್ಣ ಮುಷ್ಕರ ಹೂಡಿದ್ದಾರೆ

ಕೊಯ್ಮತ್ತೂರಿನ ಪೊಲ್ಲಾಚಿಯಿಂದ ಬಂದಿದ್ದ 16 ಮಂದಿ ಸತ್ಯಾಗ್ರಹಿಗಳು ಬೆಂಗಳೂರಿನಲ್ಲಿ ಹಿಡಿಯಲ್ಪಟ್ಟರು.

ನಿನ್ನೆ ನಂಜನಗೂಡು ಹೈಸ್ಕೂಲ್ ಬಳಿ ಲಾಠಿ ಛಾರ್ಜು ನಡೆಯಿತು

ಕರಾಚಿಯಲ್ಲಿ ಜಿನ್ನಾ — ಸುಹ್ರವರ್ದಿ ಭೇಟಿ ನಡೆಯಿತು

ನಿನ್ನೆಯ ದಿನಸ ನವದೆಹಲಿಯಲ್ಲಿ ಗಾಂದೀಜಿಯವರ ಪ್ರಾರ್ಥನಾ ಸಭೆಯಲ್ಲಿ ಹಾವು ಬಂದಿತ್ತು.

ವಿಯೂಟ್‌ನಾಂ ಸ್ವರಾಜ್ಯ ಹೋರಾಟಕ್ಕೆ ಇಂಡಿಯಾ ಬೆಂಬಲಿಸುವುದೆಂದು ನ್ಯೂಯಾರ್ಕಿನಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಿಳಿಸಿದರು.

ರೈಲ್ವೆ ಸಂಘದ ಡಜನ್ಯೂಗಳಾಗಿರುವ ಕಾರ್ಯಸಮಿತಿ ಸದಸ್ಯರನ್ನು ಸರ್ಕಾರಿ ಅಧಿಕಾರಿಗಳು ನೋಡಿದ್ದರೆಂದು ವಾರ್ತೆ

ಮೈಸೂರಿನಲ್ಲಿ ಪರಿಸ್ಥಿತಿ ಶಾಂತವಾಗಿದೆ.

Edited, Printed and Published by M. S Krishna Rao at the Satyavadi Press Chamaarja Agrahar Mysore.

ಈಗ ಮಹಾರಾಷ್ಟ್ರವಿಯವರು ತಿನ್ನೆ ಹೊರಡಿಸಿದ ಹೊಸ ರಾಜ್ಯಾಂಗ ಸುಧಾರಣಾ ಸಂದೇಶವನ್ನಿತ್ತರು. ದಿವಾನರು ನೇಮಿಸಿದ ಸಲಹಾ ಸಮಿತಿಯವರು ಕೇಳಿರುವುದನ್ನು ಪ್ರಭುಗಳು ಒಪ್ಪಿ ಸಂದೇಶವನ್ನಿತ್ತಿದ್ದಾರೆ. ಪ್ರಜಾವತ್ಸಲರಾದ ಮೈಸೂರಿನ ಪ್ರಭುಗಳು ಪ್ರಜೆಗಳ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ತುಂಬಾ ಆಸಕ್ತರು. ಇದು ರಾಜರ ಕುಲಪರಂಪರಾಗತವಾದ ವೈಶಿಷ್ಟ್ಯವು. ಅದನ್ನೇ ಅಳುವ ಮಹಾರಾಜರೂ ಅನುಸರಿಸುತ್ತಾರೆ. ಪ್ರಭುಗಳು ಪ್ರಜೆಗಳ ವಿಷಯದಲ್ಲಿ ತೋರಿದ ಪ್ರೇಮವಾತ್ಸಲ್ಯಗಳಿಗಾಗಿ ನಾವು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ದಿವಾನರು ನೇಮಿಸಿರುವ ಸಲಹಾ ಸಮಿತಿಯಾ ನಿರುಪಯೋಗಿಯಾದುದೆಂದು ಈ ಮೊದಲೇ ಎಲ್ಲರಿಂದಲೂ ಸಾರಲ್ಪಟ್ಟಿದೆ. ಸರಕಾರದ ಅಧಿಕಾರಿಗಳ ಅಕೃಯವನ್ನು ಹೊಂದಿ ಉದರಂಭರಣೆ ಮಾಡುವ ಸ್ವಭಾವದವರೇ ಹೆಚ್ಚಾಗಿರುವ ಆ ಸಮಿತಿಯಿಂದ ಯಾವ ಸತ್ವಲವೂ ಉರಟಾಗಲಾರದೆಂಬುದನ್ನು ಜನತೆ ಮೊದಲೇ ತಿಳಿದಿತ್ತು. ' ಬೇಕಾದುದನ್ನು ಬೇಡಿರಿ. ಕೊಡುತ್ತೇನೆ ' ಎಂದು ಹೇಳುವ ಕಲ್ಪತರುವಿನಂತಹ ಧಾತ್ರಿ ಮಹಾಪ್ರಭುಗಳು ನವಿರುವಾಗ, ಅವರಲ್ಲಿ ' ಏನನ್ನು ಬೇಡಿ ಪಡಕೊಳ್ಳಬೇಕು ಎಂಬುದು ಕೂಡಾ ಆ ಸಮಿತಿಯವರ ಬುದ್ಧಿಗೆ ಹೊಳೆಯಲಿಲ್ಲವಲ್ಲಾ ಎಂಬುದು ವಿಷಾದಕರವು. ಆ ಸಮಿತಿಯ ಅಭಿಪ್ರಾಯವು ಪ್ರಜಾಭಿಪ್ರಾಯವಲ್ಲ ವೆಂಬುದನ್ನು ಪ್ರಭುಗಳಲ್ಲಿ ವಿಜ್ಞಾಪಿಸುತ್ತೇವೆ.

ಸಮಿತಿಯವರು ಸಲಹೆ ಮಾಡಿರುವ ರಾಜ್ಯಾಂಗವು ಈಗ ಇರುವ ಸುಧಾರಣೆಗಿಂತ ಕೇಳುದಜೀಯದಾಗಿದೆ. ಅನೇಕ ಸಲತೆಗಳು ಸಂಸ್ಥಾನದ ರಾಜ್ಯಾಂಗವನ್ನು ಹಿಂದೆ ತಳ್ಳಿರುತ್ತದೆ.

ಶ್ರೀಮನ್ಮಹಾರಾಜರು ಸರ್ವತಂತ್ರ ಸ್ವತಂತ್ರರು. ಸಂಸ್ಥಾನದ ಎಲ್ಲಾ ವಿಷಯಗಳಲ್ಲೂ ಅವರೇ ಸರ್ವಾಧಿಕಾರಿಗಳು. ಅವರ ಅಧಿಕಾರಗಳು ಅವಿಚ್ಛಿನ್ನವಾದವು. ರಾಜರ ಅಧಿಕಾರವನ್ನು ಯಾರೂ ಪ್ರಶ್ನೆ ಮಾಡತಕ್ಕದ್ದಲ್ಲ. ಶಾಸನ ಸಭೆಗಳನ್ನು ವಿಸರ್ಜಿಸುವುದಕ್ಕೂ ಊರ್ಜಿತಗೊಳಿಸುವುದಕ್ಕೂ ಅವರು ಸಂಪೂರ್ಣ ಅಧಿಕಾರಿಗಳು. ಪರಿಸ್ಥಿತಿಯು ಹೀಗಿರುವಾಗ ಕೆಲವು ಬಾಬುಗಳನ್ನು ಮಾತ್ರ ' ಶ್ರೀಮನ್ಮಹಾರಾಜರ ಅಡಳಿತಕ್ಕೆ ಒಳಪಟ್ಟಿದೆ ' ಯೆಂದು ಹೇಳುವುದು ಅಸಾಧುವಾದುದು. ಅರಮನೆ ಇಲಾಖೆ ಮತ್ತು ಮಹಾರಾಜರ ಸ್ವಂತ ವಿಷಯಗಳನ್ನು ಬಿಟ್ಟು ಉಳಿದ ವಿಚಾರಗಳನ್ನು ಶಾಸನ ಸಭೆಯವರೇ ನ್ಯಸ್ತಗೊಳಿಸಿ ಅದರ ಮೇಲಿನ ಪೂರ್ಣಾಧಿಕಾರವು ಮಹಾರಾಜರಿಗೆ ಇರಬೇಕೆಂಬುದೇ ಪ್ರಜೆಗಳ ಆಸೆ

ನ್ಯಾಯಾಂಗ, ಆಡಿಟ್ ಸರ್ವಿಸ್ ಕಮಿಷನ್ ಇತ್ಯಾದಿ ವಿಷಯದಲ್ಲಿ ಶಾಸನ ಸಭೆಗಳಿಗೆ ಶಕ್ತ ಅಧಿಕಾರವನ್ನು ಸಮ್ಮತಿಸಿ ಮಾಡಿದ್ದಾರೆ.

ತೀರ್ಥಹಳ್ಳಿಯಲ್ಲಿ ಪೋಲೀಸ್ ವಿರೋಧ

ಸರ್ ಅಕ್ಬರ್ ಪೋಲೀಸ್ ಫೌಜನ್ನು ಜನರ ಮೇಲೆ ವ್ಯಾಘ್ರಗಳಂತೆ ಬಿಟ್ಟಿರುವರಾದರೂ, ತೀರ್ಥಹಳ್ಳಿಯಲ್ಲಿ ಪೋಲೀಸರು ಜಿಗುಪ್ಸೆಹೊಂದಿ, ಶಮ್ಸ್ ಮೇಲಾಫೀಸರರ ಆರ್ಡರನ್ನು ವಿರೋಧಿಸುವ ಮಹಿಳೆ ದೃಷ್ಟಾಂತಗಳಿವೆ. ತೀರ್ಥಹಳ್ಳಿಯ ಹೊಡ್ತಾಲ್ಲೋಕು ಆಫೀಸಿನ ಎದುರು ಪಿಕೆಟಿಂಗ್ ನಡೆಸುತ್ತಿದ್ದ ಮಹಿಳೆಯರ ಮೇಲೆ ಲಾಠಿ ಪ್ರಯೋಗ ಮಾಡಲು ಪೋಲೀಸರು ಒಪ್ಪಲಿಲ್ಲವಂತೆ ಅವಿಧಾ

Sa[illegible]

ಮೈಸೂರು ಸಿಟಿ ಮುನಿಸಿಪಾಲಿಟಿ

ನೋಟಿಫಿಕೇಷನ್ ನಂಬರು R1-472 / 45 - 46

Dated 5 th September 1947

ಮೈಸೂರು ಸಿಟಿಯಲ್ಲಿರತಕ್ಕ ರೇಟ್‌ಪೇಯರ್‌ಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸರ್ಕಾರದವರು ತಮ್ಮ 1-11-46 ನೇ ಮಕ್ರುಂ E 3422 / Edn 155-41 ನೇ. ನಂಬರು ಆರ್ಡರ್‌ನಲ್ಲಿ 1941 ನೇ ಇಸವಿ ಪ್ರಾಥಮಿಕ ವಿದ್ಯಾಭ್ಯಾಸ ಆಕ್ಟು (Elementary Education Act of 1941) ಅನುಸರಿಸಿ ರೂಪಾಯಿಗೆ ಎರಡಾಣೆಯಂತೆ ಕಟ್ಟಡಗಳ ಮತ್ತು ಖಾಲಿ ನಿವೇಶನಗಳ ಮೇಲೆ ವಧಿಸಿರುವ ವಿದ್ಯಾಭ್ಯಾಸದ ತೆರಿಗೆಯು ಆಯಾಯ ಕಟ್ಟಡಗಳ ಮತ್ತು ನಿವೇಶನಗಳಿಗೆ ನಿಗಧಿ ಮಾಡಿರುವ Annual Letting Value ವಿನ ಶೇಕಡ 9 ಭಾಗವಲ್ಲವೆಂದೂ, ಈ ತೆರಿಗೆಯು 44 –45 ನೇ ಸಾಲಿನಿಂದ ಕಟ್ಟಡಗಳು ಮತ್ತು ಖಾಲಿ ನಿವೇಶನಗಳಿಗೆ ಗೊತ್ತು ಮಾಡಿರುವ Annual Letting Value ವಿನ ಶೇಕಡ 5 ಭಾಗವೆಂದು ಹುಕ್ಕುಂ ಮಾಡಿದ್ದಾರೆ. ಆದ್ದರಿಂದ ಆ ಹುಕುಂ ಅನುಸರಿಸಿ 1-7-44 ರಿಂದ ವಿದ್ಯಾಭ್ಯಾಸ ತೆರಿಗೆಯನ್ನು ಮೇಲೆ ಹೇಳಿದಂತೆ ಕಟ್ಟಡ ಮತ್ತು ಖಾಲಿ ನಿವೇಶನಗಳಿಗೆ (Taxes on Buildings and lands) ಗೊತ್ತಾದ Annual Letting Value ಮೇಲೆ ಶೇಕಡ 5 ರಂತೆ ವಸೂಲಿ ಮಾಡಲಾಗುತ್ತೆ. ಈ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದ್ದುದರಿಂದ 44-45, 45-46 ಮತ್ತು 46-47 ನೇ ಸಾಲುಗಳಲ್ಲಿ ವಸೂಲ್ ಆಗಬೇಕಾಗಿದ್ದ ವಿದ್ಯಾಭ್ಯಾಸ ತೆರಿಗೆಯನ್ನು ಪೂರ್ತಿ ವಸೂಲ್ ಮಾಡಲು ಸಾಧ್ಯವಾಗಲಿಲ್ಲ ಕಾರಣದ ಹುಕುಂ ಇತ್ತೀಚಿಗೆ ಬಂದಿದ್ದರಿಂದಲೂ, 44-45 ರಿಂದ ಜಾರಿಗೆ ಬರಿಂದಲೂ ಮೇಲ್ಕಂಡ ಸಾಲುಗಳ ವಿದ್ಯಾಭ್ಯಾಸ ತೆರಿಗೆ ವಸೂಲಿಯು ಸಾಲಿನ (ಅಂದರೆ 47-48 ರ) ಎಪ್ರಿಲ್ ತಿಂಗಳ ಕಾಲವು ಆಗಲೇ ದರಿಂದಲೂ ಪ್ರತಿ ರೇಟ್‌ಪೇಯರುಗಳಿಗೂ ಇದಕ್ಕಾಗಿ ಪ್ರತ್ಯೇಕ ಬಿ- ನ್ನಾಳು ಸಾಲುಗಳಿಗೂ ಮತ್ತು ಚಾಲ್ತಿ ಸಾಲಿಗೂ (ಅಂದರೆ) -46 46-47 ಮತ್ತು 47-48 ನೆಯ) ಪ್ರತ್ಯೇಕ ಬಿಲ್ಲನ್ನು (Bill) ಸಾಧ್ಯವಿಲ್ಲವಾಗಿರುತ್ತೆ. ಆದಕಾರಣ ಈ ಮೊಬಲಗನ್ನು ಪಾ ಬೇಕಾಗಿರುವ ವುರಜನರೆಲ್ಲ ಈ ಪ್ರಕಟಣೆಯನ್ನೇ ಕಾನೂನಸನ್ನರೀ- ೀಸ್ ಎಂದು ಭಾವಿಸಿ ತಾವು ಹಿಂದಿನ ಸಾಲುಗಳಿಗೆ ಕೊಡಬೇಕಾ ಡನೆ ಈ ಸಾಲಿನ ಮೊಬಲಗನ್ನು ಸೇರಿಸಿ ಕೂಡಲೇ ಪಾವತಿದೂ ಕೋರಿರುತ್ತೆ. ತಾವು, ವಸೂಲಿ ಮಾಡುವ ಚಾಲ್ತಿಸಾಲು ಮನೆ ಜತೆಯಲ್ಲಿ ವಿದ್ಯಾಭ್ಯಾಸದ ತೆರಿಗೆಯನ್ನು ನಾಲ್ಕು ಸಾಲುಗಳಿಗೂ ಡುವಂತೆ ಈ ಆಫೀಸಿನ ಬಿಲ್ ಕಲೆಕ್ಟರ್‌ಗಳಿಗೆ ತಕ್ಕ ಸೂಚನೆಗಳ ಅವರುಗಳೊಡನೆ ಪುರಜನರು ಸಹಕರಿಸಬೇಕಾಗಿ ಕೋರಿರುತ್ತೆ.

ಯೂರೇ ಆಗಲೀ 44-45 45-46 ಮತ್ತು 46-47ನೇ ತೆರಿಗೆಯನ್ನು ಈ ಪ್ರಕಟಣೆಯಲ್ಲಿ ಮೇಲೆ ಹೇಳಿ ಕೊಟ್ಟಿದ್ದಲ್ಲಿ ಎಷ್ಟು ಹೆಚ್ಚಿಗೆ ಇದೆಯೆಂದೂ ಮೊಬಲಗನ್ನು ಮುಂದಿನ ಸಾಲುಗಳಿಗೆ ಜಮಾ ತೆ

N S Hirannayya
President
Council

ಗ್ಲೂಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ಲೂಪ್ ಸಿರಪ್ ರುಚಿ ಸಿಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ.

ಎಲ್ಲಾ ಪ್ರಮುಖ ಔಷಧವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..
Malleswaram P. O. Bangalore

At Opera — From 25-9-47

Daily 3 Shows

ರಾಜ್ ಕಮಲ್

ಮೈಸೂರು

ತಾ॥ 24-9-47 ರಿಂದ

ಅಮೋಘ ಆರಂಭ

ಪ್ರತಿದಿನ 3 ಆಟಗಳು

ಫಿಲಂಸ್ಥಾನ್ ಕಂಪೆನಿಯವರ

'8 ದಿನಗಳು'

(ಹಿಂದಿ)

— ಭೂಮಿಕೆ —

ಅಶೋಕಕುಮಾರ್, ವಿ.ಎಚ್. ದೇಸಾಯಿ
ನಿರಾ, ಪಾರೋ

ವುಡ್‌ಲ್ಯಾಂಡ್ಸ್

ಆಮೋಘ 2 ನೇ ವಾರ

ಸ್ವರ್ಣಲತಾ, ನಾಜೀರ್, ಇಸ್ಮಲ್

ಪಾತ್ರವಹಿಸಿರುವ

ವಾಮಿಕ' ಅಜ್ರಾ

(ಆಮೋಘ ಹಿಂದಿ ಚಿತ್ರ)

ನಾಳೆಯಿಂದ ನೈಪಾ

Woodlands

Morning Shows at 10-30
from 26-9-47 for 4 days
Thank Your Lucky Stars
with EDDY CANTER